ಬಂಗಾರದ ಆಭರಣ ಕೇವಲ ಸಾಂಪ್ರದಾಯಿಕತೆಗೆ ಮಾತ್ರ ಯೋಗ್ಯವಾದದ್ದು ಎಂದು ಅಂದುಕೊಂಡರೆ ಅದು ನಿಮ್ಮ ತಪ್ಪು ಗ್ರಹಿಕೆ. ಇಂದಿನ ಫ್ಯಾಷನ್ ಯುಗದಲ್ಲಿ ಮಾಡರ್ನ್ ಡ್ರೆಸ್ ಹಾಕುವ ಗ್ಲ್ಯಾಮರಸ್ ಬೆಡಗಿಯರು ಅತ್ಯಾಧುನಿಕ ವಿನ್ಯಾಸದ ಒಡವೆ ಧರಿಸಿ ಸಖತ್ ಆಗಿ ಮಿಂಚಬಹುದು. ಅದು ಬಟ್ಟೆಗೆ ಹೊಂದಿಕೊಂಡು, ಅದರ ಬಣ್ಣಕ್ಕೆ ಸರಿಯಾದ, ಮುಖಕ್ಕೆ ಒಪ್ಪುವ ಸೌಂದರ್ಯ ಹೆಚ್ಚಿಸುವ ಆಭರಣವಾದರೆ ಆ ಮುದ್ದುಮೊಗದ ಚೆಲುವು ಬಹುಮಂದಿಯನ್ನು ಆಕರ್ಷಿಸುವುದು ಖಚಿತ.

ಫ್ರಾಕ್, ಟೀ ಶರ್ಟ್, ಜೀನ್ಸ್ ಮತ್ತು ಟಾಪ್, ಕುರ್ತಾ, ಸ್ಕರ್ಟ್ ಮತ್ತು ಟಾಪ್‌ಗಳನ್ನು ನಾವು ಈಗ ಬಳಕೆಯಲ್ಲಿ ಕಾಣಬಹುದು. ಮಕ್ಕಳಿಂದ ಹಿಡಿದು ಈಗ ಮೊಮ್ಮಕ್ಕಳನ್ನು ಪಡೆದ ಮಾತೆಯರೂ ಇಂದು ಈ ತರಹದ ಬಟ್ಟೆಗಳನ್ನು ಧರಿಸುತ್ತಾರೆ. ಆಭರಣ ಪ್ರಿಯರು ಗಮನಿಸಬೇಕಾದ ಅಂಶ ಎಂದರೆ ಆಭರಣದ ಜೊತೆಗೆ ಪಾದರಕ್ಷೆ, ಕೇಶಶೈಲಿ ಮತ್ತು ಆಭರಣಕ್ಕೆ ಹೊಂದುವಂತೆ ಅಲಂಕರಿಸಿಕೊಳ್ಳಬೇಕು. ಎತ್ತರದ ಪೋನಿ ಟೈಲ್, ಬನ್ ತಲೆಕೂದಲನ್ನು ಅಚ್ಚುಕಟ್ಟಾಗಿ ನೇರವಾಗಿರುವಂತೆ ಬಾಚಿ ನೀಳವಾಗಿ ಬಿಡುವುದು.. ಹೀಗೆ ಒಂದಕ್ಕೊಂದು ಪೂರಕವಾಗಿದ್ದು ಡ್ರೆಸ್ ಮಾಡಿಕೊಳ್ಳಬೇಕು. ಇದು ಇಂದಿನ ಕಾಲಕ್ಕೆ ಹೊಂದಿಕೊಳ್ಳುತ್ತದೆ.

ಮುಖಕ್ಕೆ ಸ್ವಲ್ಪ ಮೇಕಪ್‌ನ ಟಚ್ ಕೊಟ್ಟು ತುಟಿಗೆ ಬಣ್ಣ ಹಚ್ಚಿದ್ದರೆ ಅಲಂಕಾರ ಚೆನ್ನಾಗಿ ಕಂಡು ನೋಡುಗರ ಕಣ್ಮನ ಸೆಳೆಯಬಹುದು. ಕಣ್ಣಿನ ಮೇಲ್ಭಾಗಕ್ಕೆ ನೀಳವಾಗಿ ಐ ಲೈನರ್ ಹಚ್ಚುವುದನ್ನು ಮರೆಯಬಾರದು.

## ಆಭರಣದ ಆಯ್ಕೆ

ದಪ್ಪಗಿನ ಚೈನು ಆದರೆ ದೊಡ್ಡ ಪೆಂಡೆಂಟ್ ಅಥವಾ ದೊಡ್ಡ ಹರಳಿನ ಕುಸುರಿ ಕೆಲಸ ಇಲ್ಲದ ಪೆಂಡೆಂಟ್ ಹಾಕಬಹುದು. ಈಗ ಓಲಾಡುವ ಪೆಂಡೆಂಟ್ ಬಳಕೆಯಲ್ಲಿದೆ. ಇದರ ಜೊತೆಗೆ ಹ್ಯಾಂಗಿಂಗ್ ಇಲ್ಲದ ಕಿವಿಯೋಲೆ ಧರಿಸಬೇಕು. ಜೊತೆಗೆ ಅದೇ ಅಳತೆಯ ಉಂಗುರವನ್ನು ಧರಿಸಬಹುದು. ಎಲ್ಲಾ ಒಂದೇ ವಿನ್ಯಾಸ, ಬಣ್ಣದ್ದಾಗಿರಲಿ ಪೆಂಡೆಂಟ್ ದೊಡ್ಡದಾಗಿದ್ದರೆ ಕುತ್ತಿಗೆಯ ಬಟ್ಟೆಯ ಮೇಲೂ ಕಾಣುತ್ತದೆ. ಚಿಕ್ಕದಾದರೆ ಆದಷ್ಟು ಕುತ್ತಿಗೆಯ ಮೇಲೆ ಇರಲಿ ಅಥವಾ ಬಟ್ಟೆಯ ಬಣ್ಣದಿಂದ ವಿರುದ್ಧ ಬಣ್ಣದ್ದಾಗಿರಲಿ.

ಚೂಡಿ, ಕುರ್ತಾಗಳಿಗೆ ಸರಿಹೊಂದುವ ಆಭರಣಗಳೆಂದರೆ ಸೇವಂತಿಗೆ ದಳದಂತಿರುವ ವೃತ್ತಾಕಾರದ ವಿನ್ಯಾಸ, ಹಂಸ, ನವಿಲು ವಿನ್ಯಾಸದ ಪದಕಗಳು ಗೊಂಚಲು ಗೊಂಚಲಾಗಿರುವ ಮುತ್ತುಗಳನ್ನು ಹೊಂದಿರುವ ವಿನ್ಯಾಸಗಳು, ಆರಿಸಿ ಧರಿಸಿ. ಜೀನ್ಸ್, ಟೀ ಶರ್ಟ್, ಟಾಪ್ (ಸಿಂಥೆಟಿಕ್) ಗಳಿಗೆ ದೊಡ್ಡ ಹರಳಿನ ತ್ರಿಕೋನ, ಆಯತ ಆಕಾರಗಳ ಸಿಂಪಲ್ ಪೆಂಡೆಂಟ್ ಹಾಕಬೇಕು. ಹವಳ ಅಥವಾ ಇತರ ಮಣಿಗಳಲ್ಲಿ ಕೆತ್ತಿದ 3 ಡಿ ಚಿತ್ರಣಗಳನ್ನು ಧರಿಸಿದರೆ ಬಹಳ ಸೊಗಸು. ಅಂದರೆ ಕೆತ್ತನೆ ಅದ್ಭುತವಾಗಿ ಗಮನ ಸೆಳೆಯುವಂತಿರಬೇಕು. ಬಹಳ ಸುಂದರವಾದ ಹೂವುಗಳು, ಪಕ್ಷಿ, ಪ್ರಾಣಿಗಳು ಲಭ್ಯವಿದೆ. ಅದರ ನೋಟವೇ ಬೇರೆ.

ಕಿವಿಯೋಲೆಗಳನ್ನು ಹಿಂದೆ ಬಟನ್ (1, 2) ಹಾಕಿ ಧರಿಸಿ ಒಪ್ಪವಾಗಿರುತ್ತದೆ. ಹಲವು ಜನರಿಗೆ ಇಂದು ಕಿವಿಯೋಲೆ ಸಮಸ್ಯೆ, ತಿರುಗಣೆ ದೊಡ್ಡದು, ದಪ್ಪ ಇದೆ ಹಾಕಲಾಗುವುದಿಲ್ಲ ಎಂದು. ಅದಕ್ಕೆ ಪರಿಹಾರ ಇದೆ. ಪ್ರಾರಂಭದಲ್ಲಿ ಹಿಂಬದಿಯ ತಿರುಗಣೆ (ತಿರುಪು) ಯನ್ನು ಮೊದಲು ನಿಮ್ಮ ಕಿವಿ ತೂತಿಗೆ ಹಾಕಿ ಅನಂತರ ಮುಂಭಾಗವನ್ನು ಸಮಾಧಾನವಾಗಿ ತಿರುಗಿಸುತ್ತಾ ಹೋಗಬೇಕು. ಆದಷ್ಟು ತಾಳ್ಮೆ ಇರಲಿ ಆಗ ಸಲೀಸಾಗಿ ದಪ್ಪಗಿನ ಭಾಗ ಹಿಂಬದಿಗೆ ಬರುತ್ತದೆ. ಬಟನ್‌ಗಳು ಓಲೆಯ ಗಾತ್ರಕ್ಕೆ ಹೊಂದಿಕೊಂಡು ಇರಲಿ. ತಿರುಗಣೆ ಉದ್ದವಾಗಿದ್ದರೆ ಅಂದರೆ ಜೋತು ಬಿದ್ದ ಹಾಗೆ ಆಗುವುದಿದ್ದರೆ ಅದನ್ನು ಮಾತ್ರ ಬದಲಿಸಿ ಚಿಕ್ಕದಾದ್ದು ಮಾಡಿಸಿಕೊಳ್ಳಿ. (ಜಾಗ್ರತೆ ಕಿವಿ ಓಲೆಯ ದಂಟು ಉದ್ದವಿದ್ದಷ್ಟು ಉದುರಿ ಹೋಗುವ ಸಂಭವ ಕಮ್ಮಿ. ಆದ್ದರಿಂದ ಬಟನ್‌ಗಳನ್ನು ಹಾಕಿ ಅಳತೆ ಸರಿಪಡಿಸಿಕೊಳ್ಳುವುದು ಉತ್ತಮ).

ಕೃತಕ ಕಿವಿಯೋಲೆಯಂತೆ ಚಿನ್ನದ ಕಡ್ಡಿ ಹಿಂಬದಿ ಇದ್ದು ಪ್ರೆಸ್ಸಿಂಗ್ ಮಾಡುವಂತಹದ್ದು ಬೇಕಾದಲ್ಲಿ ಹೇಳಿ (ಪ್ಲಾಸ್ಟಿಕ್‌ನದ್ದು ಬಳಸಬಹುದು) ಮಾಡಿಸಿಕೊಳ್ಳಬಹುದು. ಗಮನಿಸಿ ಒಮ್ಮೆ ತಯಾರಿಸಿದ ಓಲೆಯನ್ನು ಪುನಃ ಪುನಃ ಸೆಟ್ ಮಾಡಲು ಅದರಲ್ಲಿರುವ ಎಲ್ಲಾ ಹರಳು, ಮುತ್ತುಗಳನ್ನು ಸೆಟ್ಟಿಂಗ್‌ನಿಂದ ತೆಗೆದು ಪುನಃ ನಿಮಗೆ ಬೇಕಾದಂತೆ ಸರಿಪಡಿಸಿ ಆದ ಮೇಲೆ ಪುನಃ ಕೂರಿಸಬೇಕಾಗುತ್ತದೆ. ಪದೇ ಪದೇ ತೆಗೆದು ಕೂರಿಸುವುದರಿಂದ ಅದರ ಸಧೃಡತೆ ಹಾಳಾಗಿ ಉದುರಿ ಹೋಗಬಹುದು, ತುಂಡಾಗಬಹುದು. ರೆಡಿಮೇಡ್ ಆಭರಣಗಳು ಹೇಗೆ ಇವೆಯೋ ಹಾಗೇ ಧರಿಸುವುದು ಒಳ್ಳೆಯದು.

ಕಿವಿ ತೂತು ಚಿಕ್ಕದಾಗಿರುವವರು ತುಳಸಿ ಕಡ್ಡಿ ಹಾಕಿ ದೊಡ್ಡದು ಮಾಡಬಹುದು. ಇಲ್ಲವಾದಲ್ಲಿ ಹ್ಯಾಂಗಿಂಗ್(ಲೋಲಾಕ್) ಧರಿಸಿ ದೊಡ್ಡದಾಗುತ್ತದೆ.

ಕಿವಿಯೋಲೆಗಳಿಗೆ ಬಳಸುವ ಹರಳುಗಳು ಆದಷ್ಟು ತೆಳ್ಳಗೆ ಇದ್ದು ಭಾರ ಕಡಿಮೆಯದ್ದಾಗಿರಲಿ. ಆಗ ಜೋತು ಬಿದ್ದ ಹಾಗೆ ಓಲೆಗಳು ಇರದೆ ಅದರ ಆಕಾರ, ವಿನ್ಯಾಸ ನೆಟ್ಟಗೆ ನಿತ್ತು ಗೋಚರವಾಗುತ್ತದೆ. ಇಲ್ಲವಾದಲ್ಲಿ ಕಿವಿಯಲ್ಲಿ ಕೆಳಮುಖವಾಗಿ ಇರುತ್ತದೆ. ಹಿಂಬದಿ ತಿರುಗಣೆ ವೃತ್ತಾಕಾರದ ವಿನ್ಯಾಸವು ಸ್ವಲ್ಪ ಭಾರವಾಗಿದ್ದರೆ ಮುಂಬದಿಗೆ ಸಮತೋಲನಗೊಂಡು ಅಂದವಾಗಿರುತ್ತದೆ. ಚರ್ಮಕ್ಕೆ ಹಾನಿಯಾಗದಂತೆ ಮನಸ್ಸಿಗೆ, ಆತ್ಮಕ್ಕೆ ಭಾವನೆಗಳಿಗೆ ಹಿತವಾದಂತಹ ಆಭರಣ ಧರಿಸಿ. ■



## ಒಡವೆ ಸಂರಕ್ಷಣೆ ಹೇಗೆ?

- ಕೊಳೆ ಇರಬಾರದು; ಕಿವಿಯೋಲೆ ಶುದ್ಧವಾಗಿಟ್ಟುಕೊಳ್ಳಿ.
- ಹರಳುಗಳ ವಿನ್ಯಾಸ ಸರಿಯಾಗಿರಬೇಕು. ಅಂದರೆ ಚೂಪಾದ ಭಾಗ ಉದುರಿ ತುಂಡಾಗಿ ಹೋಗಿರಬಾರದು.
- ಪೆಂಡೆಂಟ್‌ಗಳಲ್ಲಿ, ಸರಗಳಲ್ಲಿ ಬಟ್ಟೆಯ ನೂಲು ಇದ್ದು ಹೊಳಪನ್ನು ಕಳೆದುಕೊಂಡಿರಬಾರದು.
- ಪೆಂಡೆಂಟ್ ತಿರುಗ ಮುರುಗ ಇರಬಾರದು. ಅಚ್ಚುಕಟ್ಟಾಗಿರಬೇಕು.
- ಸೋಪಿನ ನೊರೆ, ಬೆವರು ಇರದಂತೆ ಜಾಗ್ರತೆ ವಹಿಸಿ.
- ಮಲಗುವಾಗ ಆಭರಣವನ್ನು ಧರಿಸದಿರಿ.
- ಕೈಯನ್ನು ತೊಳೆದು ಆಭರಣವನ್ನು ಹ್ಯಾಂಡಲ್ ಮಾಡಬೇಕು. (ಜಿಡ್ಡು ಪದಾರ್ಥ ತಾಗದಿರಲಿ)